# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 730(951) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಅಡಗೂರ್ ಹೆಚ್ ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ಸಚಿವರು | : | ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 15.12.2025. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಾರ್ವಜನಿಕ ಗ್ರಂಥಾಲಯ ಇಲಾಖೆಯನ್ನು ನಿರ್ದೇಶನಾಲಯದಿಂದ ಆಯುಕ್ತಾಲಯವಾಗಿ ಉನ್ನತೀಕರಿಸಿದ ಮೇಲೆ ಆಯುಕ್ತರ ಅಧಿಕಾರ ವ್ಯಾಪ್ತಿ (ಹಂಚಿಕೆ) ಮತ್ತು ಕನ್ನಡ ಪುಸ್ತಕ ಖರೀದಿಗೆ ಕೈಗೊಂಡ ಯೋಜನೆಗಳು ಯಾವುವು: | ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಆಯುಕ್ತರ ಹುದ್ದೆಯನ್ನು ಸೃಜಿಸಿ, ನಿರ್ದೇಶಕರ ಹುದ್ದೆಗೆ ನಿಗದಿಪಡಿಸಲಾಗಿರುವ ಎಲ್ಲಾ ಅಧಿಕಾರ ಮತ್ತು ಕರ್ತವ್ಯಗಳನ್ನು ಪ್ರತ್ಯಾಯೋಜಿಸಲಾಗಿದೆ.<br><br>ಪ್ರಸ್ತುತ ಈ ಹಿಂದೆ ಇದ್ದ ಯೋಜನೆಗಳನ್ನು ಮುಂದುವರೆಸಲಾಗುತ್ತಿದ್ದು, ಅನುದಾನಕ್ಕೆ ಸೀಮಿತವಾದಂತೆ ಅನುಮೋದನೆಗೊಂಡ ಕ್ರಿಯಾ ಯೋಜನೆಯಂತೆ ಕ್ರಮ ವಹಿಸಲಾಗುತ್ತಿದೆ. |
| ಆ) | ಆಯುಕ್ತಾಲಯಕ್ಕೆ ಮಂಜೂರಾದ/ ಒದಗಿಸಲಾದ ಅನುದಾನ ಎಷ್ಟು: (ವಿವರ ಒದಗಿಸುವುದು) | 2025-26ನೇ ಸಾಲಿಗೆ ಆಯುಕ್ತಾಲಯಕ್ಕೆ<br>ಮಂಜೂರಾದ ಅನುದಾನ - ರೂ.94,60,74,000/-<br>ಒದಗಿಸಲಾದ ಅನುದಾನ - ರೂ.67,31,86,000/-<br><br>ವಿವರಗಳನ್ನು **ಅನುಬಂಧ-1ರಲ್ಲಿ** ಒದಗಿಸಲಾಗಿದೆ |
| ಇ) | ಆಯುಕ್ತಾಲಯ ಉನ್ನತೀಕರಣಕ್ಕೆ ಕಾರಣವೇನು: ಇದರಿಂದ ಕನ್ನಡ ಪುಸ್ತಕೋದ್ಯಮಕ್ಕೆ ಮತ್ತು ಲೇಖಕ ಪ್ರಕಾಶರಿಗೆ ಯಾವ ರೀತಿ ಅನುಕೂಲವಾಗಿದೆ: (ವಿವರ ನೀಡುವುದು) ಆಯುಕ್ತಾಲಯ ಉನ್ನತೀಕರಿಸಲು ಕ್ಯಾಬಿನೇಟ್ ಅನುಮೋದನೆಯಾಗಿದ್ದರೆ ಅದರ ವಿವರ ನೀಡುವುದು; | ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಕಾರ್ಯವ್ಯಾಪ್ತಿಯು ದಿನದಿಂದ ದಿನಕ್ಕೆ ವಿಸ್ತಾರವಾಗುತ್ತಿದ್ದು, ಪ್ರಸ್ತುತ ಇರುವ ನಿರ್ದೇಶಕರ ಹಂತದ ಹುದ್ದೆಯು ತಾಂತ್ರಿಕ ಸ್ವರೂಪದ ಹುದ್ದೆಯಾಗಿರುವ ಹಿನ್ನೆಲೆಯಲ್ಲಿ ಆಡಳಿತ ನಿರ್ವಹಣೆ ಕಷ್ಟಕರವಾಗಿದ್ದು, ಸದರಿ ಇಲಾಖೆಯ ಕಾರ್ಯಚಟುವಟಿಕೆಗಳ ಗುಣಮಟ್ಟ ಹೆಚ್ಚಿಸುವ ಸಲುವಾಗಿ ಹಾಗೂ ಇಲಾಖೆ ಮತ್ತು ಸರ್ಕಾರದ ಹಂತದಲ್ಲಿ ಸಮನ್ವಯ ಸಾಧಿಸಿ, ಆಡಳಿತದಲ್ಲಿ ಪಾರದರ್ಶಕತೆ ಮತ್ತು ಕಾರ್ಯಕ್ಷಮತೆ ವೃದ್ಧಿಸುವ, ಆಡಳಿತಾತ್ಮಕ ಪ್ರಕಾರ್ಯಗಳನ್ನು |

..2

<table>
<tr><td></td><td></td><td>ಸುಗಮವಾಗಿ ನಿರ್ವಹಿಸುವ ಮತ್ತು ಸರ್ಕಾರದ ಯೋಜನೆಗಳನ್ನು ನಿಗದಿತ ಕಾಲಮಿತಿಯಲ್ಲಿ ಅನುಷ್ಠಾನಗೊಳಿಸುವ ಹಿತದೃಷ್ಟಿಯಿಂದ ನಿರ್ದೇಶಕರ ಹುದ್ದೆಯ ಮೇಲಿನ ಹಂತದಲ್ಲಿ ಭಾ.ಆ.ಸೇ ವೃಂದದ ಆಯುಕ್ತರ ಹುದ್ದೆಯನ್ನು ಸೃಜನೆ ಮಾಡುವುದು ಯಥೋಚಿತವೆಂದು ತೀರ್ಮಾನಿಸಿ, ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಸರ್ಕಾರದ ಆದೇಶ ಸಂ: ಇಪಿ 32 ಎಲ್‌ಐಬಿ 2024, ದಿನಾಂಕ: 29-06-2024 ರಲ್ಲಿ, ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಆಯುಕ್ತರ ಹುದ್ದೆಯನ್ನು ಸೃಜಿಸಲಾಗಿದೆ.</td></tr>
<tr><td>ಈ)</td><td>2020ನೇ ಸಾಲಿನಿಂದ 2024-25ನೇ ಸಾಲಿನವರೆಗೆ ಏಕಗವಾಕ್ಷಿ ಯೋಜನೆಯಲ್ಲಿ ಖರೀದಿಸಿದ ಪುಸ್ತಕಗಳಿಗೆ ಪಾವತಿಸಿದ ಹಣ ಹಾಗೂ ಇದಕ್ಕಾಗಿ ಸರ್ಕಾರದಿಂದ ಒದಗಿಸಿದ ಅನುದಾನವೆಷ್ಟು: 2020ರಲ್ಲಿ ಏಕಗವಾಕ್ಷಿ ಯೋಜನೆಯಡಿಯಲ್ಲಿ ಖರೀದಿಸಿ ಪಾವತಿಯಾಗದೆ ಬಾಕಿ ಇರುವ ಮೊತ್ತವೆಷ್ಟು;</td><td>
<table>
<tr><th>ಆರ್ಥಿಕ ವರ್ಷ</th><th>ಸರ್ಕಾರದಿಂದ ಒದಗಿಸಲಾದ ಅನುದಾನ (ಲಕ್ಷಗಳಲ್ಲಿ)</th><th>ಪಾವತಿಸಿದ ಅನುದಾನ (ಲಕ್ಷಗಳಲ್ಲಿ)</th></tr>
<tr><td>2020-21</td><td>1550.00</td><td>1550.00</td></tr>
<tr><td>2021-22</td><td>1398.41</td><td>1398.41</td></tr>
<tr><td>2022-23</td><td>975.00</td><td>967.00</td></tr>
<tr><td>2023-24</td><td>855.40</td><td>855.36</td></tr>
<tr><td>2024-25</td><td>856.73</td><td>656.73</td></tr>
</table>
2020ರಲ್ಲಿ ಏಕಗವಾಕ್ಷಿ ಯೋಜನೆಯಡಿಯಲ್ಲಿ ಖರೀದಿಸಿ ಪಾವತಿಯಾಗದೆ ಬಾಕಿ ಇರುವ ಅನುದಾನ ರೂ. 686.65 ಲಕ್ಷಗಳು</td></tr>
<tr><td>ಉ)</td><td>ಕನ್ನಡ ಪುಸ್ತಕಗಳ ಪುಟವಾರು ಬೆಲೆ ಪರಿಷ್ಕರಣೆಯಾಗದೆ ಎಷ್ಟು ವರ್ಷಗಳಾಗಿವೆ: ಪುಟವಾರು ಬೆಲೆ ಮತ್ತು ವಿಶೇಷ ಅಳತೆಯ ಪುಸ್ತಕಗಳ ಬೆಲೆ ನಿಗಧಿ ಕುರಿತು ವಿಳಂಬಕ್ಕೆ ಕಾರಣವೇನು:</td><td>08 ವರ್ಷಗಳಾಗಿರುತ್ತದೆ.<br>ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ಖರೀದಿಸುವ ಪುಸ್ತಕಗಳ ಪ್ರತಿ ಪುಟಕ್ಕೆ 30 ಪೈಸೆ ಬೆಲೆ ಹೆಚ್ಚಿಸುವ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯ ಅಸಮ್ಮತಿಯ ಮೇರೆಗೆ ಸರ್ಕಾರದ ಪತ್ರ ದಿನಾಂಕ 12.05.2025ರಲ್ಲಿ ಪರಿಗಣಿಸಲು ಸಾಧ್ಯವಿಲ್ಲವೆಂದು ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ತಿಳಿಸಲಾಗಿದೆ.<br><br>ಮುಂದುವರೆದು, ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ (ರಿ.) ಬೆಂಗಳೂರು ರವರ ಪತ್ರ ದಿನಾಂಕ: 26-05-2025 ರಲ್ಲಿ, ಸಾರ್ವಜನಿಕ</td></tr>
</table>

..3

| | | |
|---|---|---|
| | | ಗ್ರಂಥಾಲಯ ಇಲಾಖೆಯಿಂದ ಖರೀದಿಸುವ ಪುಸ್ತಕಗಳಿಗೆ ಪ್ರತಿ ಪುಟಕ್ಕೆ 50 ಪೈಸೆಯನ್ನು ಹೆಚ್ಚಿಸುವಂತೆ ಮನವಿ ನೀಡಿದ ಅನುಸಾರ, ದಿನಾಂಕ: 05-07-2025 ರಂದು ಆಯುಕ್ತರ ಅಧ್ಯಕ್ಷತೆಯಲ್ಲಿ ಕಂದಾಯ ವಿಭಾಗಗಳ ಹಿರಿಯ ಅಧಿಕಾರಿಗಳ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾದಂತೆ ಪುಟವಾರು ಬೆಲೆ ಹೆಚ್ಚಿಸುವ ಮತ್ತು ವಿಶೇಷ ಅಳತೆಯ ಪುಸ್ತಕಗಳಿಗೆ ಬೆಲೆ ನಿಗದಿಪಡಿಸುವ ಕುರಿತು ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ ಅಭಿಪ್ರಾಯ ಪಡೆಯಲು ನಿರ್ಧರಿಸಿ ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ಮುದ್ರಣ ಇಲಾಖೆಗೆ ಪತ್ರ ಬರೆಯಲಾಗಿರುತ್ತದೆ. |
| ಊ) | ಕನ್ನಡದಲ್ಲಿ ಪ್ರಕಟವಾದ ಪುಸ್ತಕಗಳನ್ನು ಆಯಾ ವರ್ಷ ಖರೀದಿಸಿ ಲೇಖಕ ಪ್ರಕಾಶಕರಿಗೆ ಹಣ ಪಾವತಿಸಲು ಇಲಾಖೆಯಲ್ಲಿನ ಲೋಪವೇನು: ಎಷ್ಟು ವರ್ಷಗಳ ಪುಸ್ತಕಗಳ ಖರೀದಿ ಬಾಕಿ ಉಳಿದಿದೆ: ನಗರಸಭೆ, ಪಟ್ಟಣ ಪಂಚಾಯತ್ ಇವುಗಳಿಂದ ಬರಬೇಕಾಗಿರುವ ಬಾಕಿ ಸೆಸ್ ಹಣ ಎಷ್ಟು: (ಬೆಂಗಳೂರು ನಗರವು ಸೇರಿದಂತೆ ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕುಗಳಿಂದ ಮಾಹಿತಿ ನೀಡುವುದು) | 2021 ರಲ್ಲಿ ಮುದ್ರಣಗೊಂಡು ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಯಾದ ಪುಸ್ತಕಗಳನ್ನು ರಾಜ್ಯದ ಎಲ್ಲಾ ಜಿಲ್ಲಾ/ನಗರ ಕೇಂದ್ರ ಗ್ರಂಥಾಲಯಗಳ ಪ್ರಾಧಿಕಾರದ ಆಯವ್ಯಯದಲ್ಲಿ ಪುಸ್ತಕ ಖರೀದಿಗೆ ಮೀಸಲಿರಿಸಿದ ಅನುದಾನದಲ್ಲಿ ಖರೀದಿಸಿ ಲೇಖಕ ಪ್ರಕಾಶಕರಿಗೆ ಹಣ ಪಾವತಿಸಲಾಗಿದೆ.<br><br>2022 ರಲ್ಲಿ ಮುದ್ರಣಗೊಂಡ ಪುಸ್ತಕಗಳ ಆಯ್ಕೆ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು, ಆಯ್ಕೆಯಾದ ಪುಸ್ತಕಗಳನ್ನು ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ಸರ್ಕಾರದ ಅನುಮೋದನೆಗೆ ಸಲ್ಲಿಸಿ, ಅನುಮೋದನೆ ಪಡೆದ ನಂತರ ಖರೀದಿ ಪ್ರಕ್ರಿಯೆ ಕೈಗೊಳ್ಳಲಾಗುತ್ತದೆ.<br><br>ಸರ್ಕಾರದ ಆದೇಶ ಸಂ: ಇಪಿ 84 ಎಲ್ಐಬಿ 2023, ಬೆಂಗಳೂರು ದಿನಾಂಕ: 20-09-2023 ರನ್ವಯ ಡಾ.ಕರೀಗೌಡ ಬೀಚನಹಳ್ಳಿ ಇವರ ಅಧ್ಯಕ್ಷತೆಯಲ್ಲಿ ಪುನರ್ ರಚಿಸಲಾದ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯ ಅವಧಿಯು ಪೂರ್ಣಗೊಂಡಿರುವುದರಿಂದ ಹಾಗೂ ಸದರಿ ಅಧ್ಯಕ್ಷರು ರಾಜೀನಾಮೆ ಸಲ್ಲಿಸಿರುವ ಕಾರಣ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯ ಪುನರ್ ರಚನೆ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಕೆಯಾಗಿದ್ದು, ಪರಿಶೀಲನೆಯಲ್ಲಿದೆ.<br><br>ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿ ರಚನೆಯಾದ ನಂತರ 2023 ಮತ್ತು 2024 ರಲ್ಲಿ ಮುದ್ರಣಗೊಂಡ ಪುಸ್ತಕಗಳ ಆಯ್ಕೆ ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತದೆ. |

| | | |
|---|---|---|
| | | ಬೆಂಗಳೂರು ನಗರವು ಸೇರಿದಂತೆ ಎಲ್ಲಾ ಜಿಲ್ಲೆ ಮತ್ತು ನಗರಸಭೆ, ಪಟ್ಟಣ ಪಂಚಾಯತ್ ಗಳಿಂದ ಹಿಂದಿನ ಬಾಕಿಯೂ ಸೇರಿದಂತೆ ದಿ: 31-03-2025 ರ ಅಂತ್ಯಕ್ಕೆ ಬಾಕಿ ಗ್ರಂಥಾಲಯ ಕರ ರೂ.526,83,26,000.00 /-<br><br>ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಿದೆ. |
| (ಋ) | ಬೆಂಗಳೂರು ನಗರವನ್ನು ಗ್ರೇಟರ್ ಬೆಂಗಳೂರಾಗಿ ಉನ್ನತೀಕರಿಸಿದ ನಂತರ ವಾರ್ಡ್‌ಗಳು ಹೆಚ್ಚಿದಂತೆ ಗ್ರಂಥಾಲಯ ಕರ ವಸೂಲಾತಿ ಸಂಗ್ರಹಕ್ಕೆ ಕೈಗೊಂಡ ಕ್ರಮಗಳೇನು; ಇಲಾಖೆಯ ಹೊಸ ಶಾಖೆಗಳ ವಿಸ್ತರಣೆ ಮತ್ತು ತೆರಿಗೆದಾರರ ಓದಿಗೆ ಕನ್ನಡದ ಹೆಚ್ಚು ಪುಸ್ತಕಗಳ ಪ್ರತಿಗಳ ಖರೀದಿಗೆ ಕೈಗೊಂಡ ಕ್ರಮಗಳೇನು? | ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ 5 ವಲಯ ಕಛೇರಿಗಳು ಕಾರ್ಯನಿರ್ವಹಿಸುತ್ತಿದ್ದು, ಗ್ರೇಟರ್ ಬೆಂಗಳೂರು ಪ್ರಾಧಿಕಾರದಂತೆ ವಲಯಗಳನ್ನು ಪುನರ್ ವಿಂಗಡಿಸುವ ಬಗ್ಗೆ ಪ್ರಸ್ತಾವನೆಯು ಆಯುಕ್ತಾಲಯದಿಂದ ಸಲ್ಲಿಕೆಯಾಗಿರುವುದಿಲ್ಲ. ವರದಿ ಬಂದ ನಂತರ ಕ್ರಮವಹಿಸಲಾಗುವುದು. |

**ಸಂಖ್ಯೆ: ಇಪಿ/ 147 /ಎಲ್‌ಐಬಿ/2025**

**(ಎಸ್. ಮಧು ಬಂಗಾರಪ್ಪ)**

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ಅನುಬಂಧ - 1

| ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು | | | |
|---|---|---|---|
| 22025-26ನೇ ಸಾಲಿನ ದಿನಾಂಕ: 30-11-2025 ರ ಅಂತ್ಯಕ್ಕೆ ಸಂಚಿತ ನಿಧಿ ಆಯವ್ಯಯ ಹಂಚಿಕೆಯಲ್ಲಿ ಮಂಜೂರಾದ / ಒದಗಿಸಲಾದ ಅನುದಾನದ ವಿವರ | | | |
| ಕ್ರ. ಸಂ. | ಲೆಕ್ಕಶೀರ್ಷಿಕೆ (2205-00-105-0-01) | ಸರ್ಕಾರದಿಂದ ಹಂಚಿಕೆಯಾದ ಅನುದಾನದ ಮೊತ್ತ | ಸರ್ಕಾರದಿಂದ ಇಲ್ಲಿಯವರೆಗೆ ಬಿಡುಗಡೆಯಾದ ಅನುದಾನದ ಮೊತ್ತ |
| 1 | 2 | 3 | 4 |
| 1 | 002- ವೇತನ ಅಧಿಕಾರಿಗಳು | 510300000.00 | 382725000.00 |
| 2 | 011 - ತುಟ್ಟಿ ಭತ್ಯೆ | 112300000.00 | 84225000.00 |
| 3 | 014 - ಇತರೆ ಭತ್ಯೆ | 76700000.00 | 57525000.00 |
| 4 | 021- ವೈದ್ಯಕೀಯ ವೆಚ್ಚ ಮರುಪಾವತಿ | 5500000.00 | 1375000.00 |
| 5 | 041-ಪ್ರಯಾಣ ವೆಚ್ಚ | 400000.00 | 50000.00 |
| 6 | 051-ಸಾಮಾನ್ಯ ವೆಚ್ಚ | 7000000.00 | 5250000.00 |
| 7 | 071-ಕಟ್ಟಡ ವೆಚ್ಚ | 4000000.00 | 2000000.00 |
| 8 | 195-ಸಾರಿಗೆ ವೆಚ್ಚ | 447000.00 | 100000.00 |
| 9 | 033-ದಿನಗೂಲಿ | 25265000.00 | 18948000.00 |
| 10 | 015 - ಪೂರಕ ವೆಚ್ಚಗಳು | 95000000.00 | 47500000.00 |
| 11 | 050-ಕಛೇರಿ ವೆಚ್ಚ | 2500000.00 | 1250000.00 |
| 12 | 251-ಪಿಂಚಣಿ ಮತ್ತು ನಿವೃತ್ತಿ ಸೌಲಭ್ಯಗಳು | 6662000.00 | 3265000.00 |
| | **ಲೆಕ್ಕ ಶೀರ್ಷಿಕೆ:- 4202-04-105-3-01** | | |
| 13 | 132 - ಇತರೆ ಖರ್ಚುಗಳು | 75900000.00 | 56925000.00 |
| 14 | 422 - ಪರಿಶಿಷ್ಟ ಜಾತಿ ಉಪಯೋಜನೆ | 17150000.00 | 8574000.00 |
| 15 | 423 - ಗಿರಿಜನ ಉಪಯೋಜನೆ | 6950000.00 | 3474000.00 |
| | **Total :** | **946074000.00** | **673186000.00** |

ಎಸ್/ Acts/sanchithanidhi (ವ)

## ಅನುಬಂಧ-1

ರಾಜ್ಯದ ಎಲ್ಲಾ ಸ್ಥಳೀಯ ಸಂಸ್ಥೆಗಳಿಂದ ದಿನಾಂಕ 31-03-2025 ರ ಅಂತ್ಯದವರೆಗೆ ಸಂಗ್ರಹಿಸಲಾದ ಗ್ರಂಥಾಲಯ ಕರ ಬಾಕಿ ವಿವರ (ರೂ.ಗಳಲ್ಲಿ)

| ಕ್ರ.ಸಂ. | ಜಿಲ್ಲೆಗಳ ಹೆಸರು | ಆರಂಭಿಕ ಶಿಲ್ಕು (ದಿ: 01-04-2024) | 2024-25 ರಲ್ಲಿ ಸಂಗ್ರಹಿಸಿದ ಕರ | ಒಟ್ಟು (3+4) | ಒಟ್ಟು ಪಾವತಿಸಿದ್ದು | ಬಾಕಿ (31-03-2025 ರ ಅಂತ್ಯಕ್ಕೆ ) |
|---|---|---|---|---|---|---|
| 1 | ಬಿಬಿಎಂಪಿ | 5193200000 | 1725300000 | 6918500000 | 2308100000 | 4610400000 |
| 2 | ಬಾಗಲಕೋಟೆ | 24225000 | 17202000 | 41427000 | 13801000 | 27626000 |
| 3 | ಬಳ್ಳಾರಿ | 29000000 | 9000000 | 38000000 | 17900000 | 20100000 |
| 4 | ಬೆಂ.ಗ್ರಾಮಾಂತರ | 9900000 | 33900000 | 43800000 | 28600000 | 15200000 |
| 5 | ಬೆಂಗಳೂರು ನಗರ | 38300000 | 62700000 | 101000000 | 49400000 | 51600000 |
| 6 | ಬೆಳಗಾವಿ | 27900000 | 47300000 | 75200000 | 43100000 | 32100000 |
| 7 | ಬೀದರ್ | 7600000 | 5600000 | 13200000 | 6300000 | 6900000 |
| 8 | ಚಾಮರಾಜನಗರ | 3700000 | 7200000 | 10900000 | 7500000 | 3400000 |
| 9 | ಚಿಕ್ಕಮಗಳೂರು | 3600000 | 13800000 | 17400000 | 15700000 | 1700000 |
| 10 | ಚಿಕ್ಕಬಳ್ಳಾಪುರ | 2400000 | 10000000 | 12400000 | 8600000 | 3800000 |
| 11 | ಚಿತ್ರದುರ್ಗ | 2200000 | 15500000 | 17700000 | 14700000 | 3000000 |
| 12 | ದಕ್ಷಿಣ ಕನ್ನಡ | 13600000 | 53200000 | 66800000 | 63400000 | 3400000 |
| 13 | ದಾವಣಗೆರೆ | 12000000 | 26700000 | 38700000 | 32300000 | 6400000 |
| 14 | ಧಾರವಾಡ | 15600000 | 45500000 | 61100000 | 35600000 | 25500000 |
| 15 | ಗದಗ | 3200000 | 11700000 | 14900000 | 10300000 | 4600000 |
| 16 | ಹಾಸನ | 14400000 | 24200000 | 38600000 | 12600000 | 26000000 |
| 17 | ಹಾವೇರಿ | 12000000 | 11200000 | 23200000 | 9700000 | 13500000 |
| 18 | ಕಲಬುರಗಿ | 22000000 | 18900000 | 40900000 | 10500000 | 30400000 |
| 19 | ಕೊಡಗು | 2300000 | 5400000 | 7700000 | 4600000 | 3100000 |
| 20 | ಕೋಲಾರ | 37600000 | 15100000 | 52700000 | 19700000 | 33000000 |
| 21 | ಕೊಪ್ಪಳ | 5000000 | 11000000 | 16000000 | 9700000 | 6300000 |
| 22 | ಮಂಡ್ಯ | 26100000 | 15000000 | 41100000 | 12300000 | 28800000 |
| 23 | ಮೈಸೂರು | 217100000 | 105300000 | 322400000 | 117500000 | 204900000 |
| 24 | ರಾಯಚೂರು | 3000000 | 14500000 | 17500000 | 15800000 | 1700000 |
| 25 | ರಾಮನಗರ | 2700000 | 17000000 | 19700000 | 14000000 | 5700000 |
| 26 | ಶಿವಮೊಗ್ಗ | 12600000 | 31600000 | 44200000 | 29600000 | 14600000 |
| 27 | ತುಮಕೂರು | 10000000 | 36000000 | 46000000 | 32700000 | 13300000 |
| 28 | ಉಡುಪಿ | 4300000 | 16100000 | 20400000 | 19100000 | 1300000 |
| 29 | ಉತ್ತರ ಕನ್ನಡ | 2000000 | 11900000 | 13900000 | 11500000 | 2400000 |
| 30 | ವಿಜಯನಗರ | 9900000 | 11700000 | 21600000 | 9700000 | 11900000 |
| 31 | ವಿಜಯಪುರ | 46400000 | 18600000 | 65000000 | 16400000 | 48600000 |
| 32 | ಯಾದಗಿರಿ | 4900000 | 7400000 | 12300000 | 5200000 | 7100000 |
| | ಒಟ್ಟು | 5818725000 | 2455502000 | 8274227000 | 3005901000 | 5268326000 |

ಆಯುಕ್ತರು
ಸಾರ್ವಜನಿಕ ಗ್ರಂಥಾಲಯ ಇಲಾಖೆ
ಬೆಂಗಳೂರು

V*Acts/Library cess 2024-25